ಎದೆಯುಬ್ಬಿಸಿ ಮೆಲ್ಲ ಮೆಲ್ಲಗೆ ತಲೆಯೆತ್ತಿ ಕಣ್ಣೆತ್ತಿ ಧೈರ್ಯಮಾಡಿ ಚಂಚಲೆಯ ಕಡೆಗೆ ಚಪಲದೃಷ್ಟಿ ಬೀರಲಾರಂಭಿಸಿದ.

ಅವಳ ಬೆಳದಿಂಗಳು ಚೆಲ್ಲುವ ಮುಖದಲ್ಲಿ ಪ್ರೇಮದ ಚಿಲುಮೆಗಳನ್ನುಕ್ಕಿಸಲು ಸಾಧ್ಯವೆ?– ಎಂದು ಯೋಚಿಸತೊಡಗಿದ. ಒಂದು ದಿನ ಎಲ್ಲರ ಮೇಜಿನ ಮೇಲೂ ಒಂದು ಕವರನ್ನು ತಂದಿರಿಸಿ 'ಅಗತ್ಯವಾಗಿ ಬರಬೇಕು' ಎಂದು ಚಂಚಲೆ ಎಂದಾಗ ಕುತೂಹಲದಿಂದ ಕವರನ್ನು ಒಡೆದು ನೋಡಿದಾಗ ಕಂಡುದು ಚಂಚಲೆಯ ವಿವಾಹದ ಆಮಂತ್ರಣ ಪತ್ರಿಕೆ.

ಕುಸಿದ ಎದೆ ಮತ್ತು ಕುಸಿದ ಮನಸ್ಸಿನಿಂದ, ಮಣಭಾರದ ಪೆನ್ನನ್ನೆತ್ತಿ ಚಂಚಲೆಯ ಕಡೆಗೆ ಚಪಲದೃಷ್ಟಿಯನ್ನು ಬೀರಲಾರದೆ, ಇನ್ನವಳ ಯೋಚನೆಯನ್ನು ಬಿಟ್ಟುಬಿಡಬೇಕು. ಈ ಕ್ಲಾರ್ಕ್ ತನದಲ್ಲೇ ಏನಾದರೂ ಸಾಧಿಸಲು ಸಾಧ್ಯವಿದೆಯೆ ಎಂದು ನೋಡಬೇಕು ಎಂದುಕೊಂಡು ಫೈಲುಗಳನ್ನು ದೂಡುತ್ತಿದ್ದಾಗ...

ಚಂಚಲೆಯ ಮದುವೆಗೆ ಎರಡು ದಿನಗಳ ಮೊದಲು, 'ಚಂಚಲೆಯ ಮದುವೆಯನ್ನು ಅನಿವಾರ್ಯ ಕಾರಣಗಳಿಂದ ಮುಂದೂಡಲಾಗಿದೆ' ಎಂಬ ಜಾಹೀರಾತನ್ನು ಪೇಪರಿನಲ್ಲಿ ಓದಿ, ಮರುದಿನ ಆಫೀಸಿನಲ್ಲಿ ಚಂಚಲೆಯ ಮದುವೆ ಮುರಿದುಬಿದ್ದದ್ದು ಸ್ಪಷ್ಟವಾಗಿ, ಏನುಕಾರಣವೆಂದು ತಿಳಿಯಲು ಪ್ರಯತ್ನಿಸಿದರೂ ತಿಳಿಯಲಿಲ್ಲ. ಪಕ್ಕದ ಸೀಟಿನ ವರದ ಶೆಣೈ, 'ಕಾದುನೋಡು ತಿಳಿಯುತ್ತೆ' ಎಂದು ಹೇಳಿದಾಗ ಇದರಲ್ಲಿ ಏನೋ ರಹಸ್ಯವಿರಬೇಕು ಎಂದು ತೋರಿದರೂ ಪ್ರಿಯವಾದ ವ್ಯಕ್ತಿಯ ಬಗ್ಗೆ ಅಪ್ರಿಯವಾದ ತನಿಖೆಯನ್ನು ನಡೆಸಲು ನಿರಾಸಕ್ತನಾಗಿ, ಬಾಡಿದ ಮುಖದ ಚಂಚಲೆಯನ್ನು ಕಂಡು ಒಳಗೊಳಗೇ ಅನ್‌ಕಾನ್ಶಸ್‌ನಲ್ಲಿ ಕನಿಕರಿಸಿ, ಇನ್ನಷ್ಟು ಕಾಲ ಆಫೀಸಿನಲ್ಲಿ ಇರುತ್ತಾಳಲ್ಲಾ ಎಂದು ಸಬ್‌ಕಾನ್ಷೆಸ್‌ನಲ್ಲಿ ಸಮಾಧಾನಪಟ್ಟುಕೊಂಡ.

*****

ಹೋಟೆಲ್ 'ತುಷಾರ್'ನ ಕ್ರೀಮ್ ಪಾರ್ಲರಿನಲ್ಲಿ ಗೆಳತಿಯರೊಂದಿಗೆ ಒಂದು ದಿನ ಐಸ್‌ಕ್ರೀಮ್ ಸವಿಯುತ್ತಿದ್ದ ಚಂಚಲೆಯೊಂದಿಗೆ ನಡೆಸಿದ ಇನ್‌ಫಾರ್ಮಲ್ ಹರಟೆಯಲ್ಲಿ ಚಂಚಲೆಯ ಗೆಳತಿ ಸುಮಿತ್ರಳಿಂದ ಸ್ಮಾರ್ಟ್‌ಗೈ ಎಂಬ ಬಿರುದನ್ನು ಪಡಕೊಂಡ ಮೇಲೆ ಚಂಚಲೆಗೂ ಎಲೆಯಮರೆಯ ಮುಳ್ಳಿನಂತಿದ್ದ ವೆಂಕಟರಮಣನ ಸ್ಮಾರ್ಟ್‌ತನದ ಅರಿವಾದಂತೆನ್ನಿಸಿತು. ಕ್ರಮೇಣ ಮಿಸ್ಟರ್ ವೆಂಕಟರಮಣ. ಮಿಸ್ಟರ್ ರಮಣ್ ಆಗಿ, ಬರೀ ರಮಣ್ ಆಗಿ ಬಿ.ಎ.ಯ ದಿನಗಳ ಹಳೆಯ ಸಲುಗೆಯು ಮರಳಿ ಚಿಗುರೊಡೆದು, ಬೆಳೆದು,

**ಮಿಸ್ಟರ್ ವೆಂಕಟರಮಣ. ಮಿಸ್ಟರ್ ರಮಣ್ ಆಗಿ, ಬರೀ ರಮಣ್ ಆಗಿ ಬಿ.ಎ.ಯ ದಿನಗಳ ಹಳೆಯ ಸಲುಗೆಯು ಮರಳಿ ಚಿಗುರೊಡೆದು, ಬೆಳೆದು, ಆಫೀಸರ್– ಕ್ಲಾರ್ಕ್ ಭೇದವು ಮಾಯವಾಗಿ, ರಮಣ್ 'ರಮ್' ಆಗಿ ಚಂಚಲೆ 'ಚಂ' ಆಗಿ ಒಂದು ದಿನ ಜತೆಯಾಗಿ ಸಿನಿಮಾಕ್ಕೆ ಹೋಗುವಷ್ಟು ಮುಂದರಿಯಿತು; ಸಿನಿಮಾದ ಕತೆ ನಿಜವಾಗುವುದೂ ಸಾಧ್ಯವೆಂದು ತೋರುವಲ್ಲಿಗೆ ಮುಟ್ಟಿತು.**